ಓ.ಎಸ್. ನಂ. 66/2009
ಡಿ.ಡಬ್ಲ್ಯೂ -1

**<u>ಸಾಕ್ಷಿಯನ್ನು ದಿನಾಂಕ:26.09.2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರೆದ ಪಾಟೀಸವಾಲುಃ ಶ್ರೀ ಪಿ.ಡಿ.ಟಿ. ವಕೀಲರಿಂದ</u>**

**1.** ದಿಃ29.07.1961 ರ ಕ್ರಯ ಪತ್ರವು ಯಾವಾಗ ಸಿಕ್ಕಿರುತ್ತದೆ ಎಂದರೆ ಕ್ರಯ ಪತ್ರವನ್ನು ಬರೆದುಕೊಟ್ಟಾಗ ಸಿಕ್ಕಿರುತ್ತದೆ ಎಂದು ನುಡಿದಿದ್ದಾರೆ. ನನಗೆ 65 ವರ್ಷ. ಈ ದಾಖಲೆಯನ್ನು ಯಾವುದೇ ಕಂದಾಯ ಇಲಾಖೆಯಲ್ಲಿ ಹಾಜರು ಪಡಿಸಿ ಯಾವುದೇ ಖಾತೆ ಮಾಡಿಸಿಕೊಂಡಿರುವುದಿಲ್ಲ. ಕ್ರಯ ಪತ್ರ ಬರೆದ ಕಾಲಕ್ಕೆ ನನಗೆ 5 ವರ್ಷ ವಯಸ್ಸಾಗಿತ್ತು. ಸದರಿ ಕ್ರಯ ಪತ್ರವನ್ನು ನಮ್ಮ ಮನೆಯಲ್ಲಿ ಬರೆದಿರುತ್ತಾರೆ. ಕ್ರಯ ಪತ್ರಕ್ಕೆ ನಮ್ಮ ಮಾವ ಚಿಕ್ಕರಾಮಯ್ಯ ಹಾಗೂ ಇನ್ನೊಬ್ಬರು ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆ. ಕ್ರಯ ಪತ್ರವನ್ನು ಸಂಜೀವಯ್ಯ ಎಂಬ ಪತ್ರಬರಹಗಾರರು ಬರೆದಿರುತ್ತಾರೆ.

**2.** ಸಾಕ್ಷಿದಾರರಾದ ಚಿಕ್ಕರಾಮಯ್ಯನವರಿಗೆ ಮಕ್ಕಳಿರುತ್ತಾರೆ. ಸಂಜೀವಯ್ಯನವರ ಮಕ್ಕಳು ಮತ್ತು ಮೊಮ್ಮಕ್ಕಳು ಇರುತ್ತಾರೆ. ನಿಡಿ-39 ರಂತೆ ಕ್ರಯ ಪತ್ರವನ್ನು ನರಸಯ್ಯನವರು ಸಂಜೀವಣ್ಣನವರಿಗೆ ಬರೆದುಕೊಟ್ಟಿರುವುದಿಲ್ಲ. ನಿಡಿ-39 ರ ಮೇಲೆ ಗೆರೆಗಳನ್ನು ರಾಮಸಂಜೀವಯ್ಯನವರು ಎಳೆದಿರುತ್ತಾರೆ. ಸಾಕ್ಷಿ ಮುಂದುವರೆದು ಕೊರಟಗೆರೆಯ ಎಸ್‌ಎಸ್‌ಆರ್ ಹೋಟೆಲ್‌ನ ಹತ್ತಿರ ರಾಮಸಂಜೀವಯ್ಯನವರು ಆಸ್ತಿಯನ್ನು ಕೇಳಿರುತ್ತಾರೆ ನಾವು ಕೊಡುವುದಿಲ್ಲ ಎಂದು ಹೇಳಿದಾಗ ನಿಡಿ-39 ರ ದಾಖಲೆಯ ಮೇಲೆ ಗೆರೆಗಳನ್ನು ಎಳೆದಿರುತ್ತಾರೆ. 1995 ನೇ ಸಾಲಿನಲ್ಲಿ ನಿಡಿ-39 ರ ದಾಖಲೆಯ ಮೇಲೆ ಗೆರೆಗಳನ್ನು ಎಳೆದಿರುತ್ತಾರೆ. ಗೆರೆಗಳನ್ನು ಎಳೆದಿರುವ ವಿಚಾರವನ್ನು ತಕರಾರಿನಲ್ಲಿ ನಮೂದು ಮಾಡಿರುತ್ತೇನೆ. ಆ ಬಗ್ಗೆ ಪೊಲೀಸರಿಗೆ ದೂರನ್ನು ನೀಡಿರುವುದಿಲ್ಲ. ನಿಡಿ-39 ರ ದಾಖಲೆಯ ಮೇಲೆ ಗೆರೆಗಳನ್ನು ನಾವೇ ಎಳೆದಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಹಿ/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**